28	ತುಮಕೂರು	–	–	–	–
29	ಉಡುಪಿ	–	–	–	–
30	ಉತ್ತರ ಕನ್ನಡ	–	–	–	–
	ಒಟ್ಟು	17	09	01	–

4336 (4149) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :- ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವೇರಿ ಜಲವಿವಾದ ಇತ್ಯರ್ಥಕ್ಕೆ ನ್ಯಾಯಾಧೀಕರಣ ಸ್ಥಾಪನೆಯಾಗಿದ್ದು ಯಾವಾಗ; ನ್ಯಾಯಾಧೀಕರಣ ಇದುವರೆಗೂ ನಡೆಸಿರುವ ಸಭೆಗಳು ಎಷ್ಟು;

ಆ) ಕಾವೇರಿ ನ್ಯಾಯಾಧೀಕರಣ ನೀಡಿರುವ ಮಧ್ಯಂತರ ತೀರ್ಪಿನ ಸಾರಾಂಶವೇನು;

ಇ) ರಾಜ್ಯ ಸರ್ಕಾರ ನ್ಯಾಯಾಧೀಕರಣದ ಮುಂದೆ ಮಂಡಿಸಿರುವ ವಾದದ ಸಾರಾಂಶವೇನು;

ಈ) ನ್ಯಾಯಾಧೀಕರಣದ ಅಂತಿಮ ತೀರ್ಪು ಹೊರಬೀಳುವುದು ಯಾವಾಗ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಕಾವೇರಿ ಜಲ ವಿವಾದ ನ್ಯಾಯಾಧೀಕರಣವನ್ನು ದಿನಾಂಕ : 02.06.1990 ರಂದು ರಚಿಸಲಾಯಿತು. ನ್ಯಾಯಾಧಿಕರಣ ಇದುವರೆಗೆ 504 ಸಭೆಗಳನ್ನು ನಡೆಸಿದೆ.

ಆ) ಕಾವೇರಿ ನ್ಯಾಯಾಧೀಕರಣದ ದಿನಾಂಕ : 25.06.1991 ರ ಮಧ್ಯಂತರ ಆದೇಶದ ಮುಖ್ಯಾಂಶಗಳು ಕೆಳಗಿನಂತಿವೆ.

a) The State of Karnataka to release water from its reservoirs so as to ensure that 205 tmc of water is available in Tamil Nadu's Mettur Reservoir in a year from June to May in the following manner.

(Unit in tmc)

June	10.16	December	10.37
July	42.76	January	2.51
August	54.72	February	2.17
September	29.36	March	2.40
October	30.17	April	2.32
November	16.05	May	2.01

b) In respect of a particular month the releases are to be made in four weeks in four equal installments.

c) The State of Karnataka shall not increase its area under irrigation beyond existing 11.2 lakh acres.

d) The order will be effective from 1st July 1991 and will remain operative till the final adjudication of the Tribunal.

ಇ) ನ್ಯಾಯಾಧಿಕರಣವು 50 ವಿವಾದಾಂಶಗಳನ್ನು ಗುರುತಿಸಿದೆ. ಅವುಗಳನ್ನು ಮೂರು ಗುಂಪುಗಳನ್ನಾಗಿ ವರ್ಗೀಕರಿಸಿದೆ. ವಿವಾದಾಂಶಗಳ ಬಗ್ಗೆ ರಾಜ್ಯದ ವಾದಗಳ ಸಾರಾಂಶಗಳು ಕೆಳಗಿನಂತಿವೆ.

a) The Group – I Issues deal with Agreements of 1892 and 1924.

The agreements are inequitable in nature. The 1892 Agreement had been entered into under the constraint of the Doctrine of Paramount power and was not based on consideration of equitable apportionment. On a true interpretation of the Agreement, the 1924 Agreement, the 1924 Agreement came to an end in February 1974. This was also the accepted understanding of the parties.

b) The Group-II Issues deals with availability of water- Surface flows, additional/alternative resources.

The yield as per Cauvery Fact Finding Committee (CFFC) can not be relied and it is much more than 800 tmc. It is to be re-assessed. The Groundwater available in delta region is also to be taken into consideration.

c) Group-III Issues deals with Equitable apportionment and related subjects.

Karnataka has started its arguments and the same is in progress.

ಈ) ನ್ಯಾಯಾಧೀಕರಣವು ಅಂತಿಮ ತೀರ್ಪನ್ನು ಆಗಸ್ಟ್ 2006ರ ವೇಳಗೆ ನೀಡುವ ಸಂಭವವಿದೆ.

4337 (4150) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :– ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭೀಮಾ ಏತ ನೀರಾವರಿ ಯೋಜನೆ ಹಾಲಿ ಯಾವ ಹಂತದಲ್ಲಿದೆ;

ಆ) ರಾಜ್ಯ ಸರ್ಕಾರ ಯೋಜನೆಯ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಯಾವಾಗ ಕಳುಹಿಸಲಾಗಿದೆ;

ಇ) ಕೇಂದ್ರ ಸರ್ಕಾರ ಪ್ರಸ್ತಾವನೆಗೆ ಅನುಮೋದನೆ ನೀಡಿದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು;

ಈ) ಕೇಂದ್ರ ಸರ್ಕಾರ ಪ್ರಸ್ತಾವನೆಯನ್ನು ವಾಪಸ್ ಕಳುಹಿಸಿದೆಯೇ; ಹಾಗಿದ್ದಲ್ಲಿ ಕಾರಣಗಳೇನು;

ಉ) ಸದರಿ ಯೋಜನೆಗೆ ಅನುಮೋದನೆ ಪಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?